ಪಿ.ಡಬ್ಲ್ಯು. 1

(ಇಂದು ದಿನಾಂಕ 29-01-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎ.ಎಂ.ಜಿ. ವಕೀಲರಿಂದಃ**

ಸಾಮಾನ್ಯವಾಗಿ ಯಾವುದೇ ವ್ಯಕ್ತಿ ಸಾಲವನ್ನು ಕೊಡುವಾಗ ಅವರ ಆರ್ಥಿಕ ಸಾಮರ್ಥ್ಯ ಮತ್ತು ಸ್ಥಿತಿಗತಿಯನ್ನು ನೋಡಿ ಮಂಜೂರು ಮಾಡುತ್ತೇವೆ ಎಂದರೆ ಸರಿ. ನಾವು ಸಾಲ ಕೊಡುವಾಗ ಭದ್ರತೆಯನ್ನು ಪಡೆದುಕೊಂಡು ಸಾಲ ಕೊಡುತ್ತೇವೆ ಎಂದರೆ ಸರಿ. ಸಾಮಾನ್ಯವಾಗಿ ವೇತನ ಪ್ರಮಾಣಪತ್ರ ಮತ್ತು ಚೆಕ್ಕಗಳನ್ನು ಭದ್ರತೆಗಾಗಿ ತೆಗೆದುಕೊಳ್ಳುತ್ತೀರಿ ಎಂದರೆ ಸಾಕ್ಷಿ ವೇತನ ಪ್ರಮಾಣಪತ್ರ ಮಾತ್ರ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಭದ್ರತೆ ಇಲ್ಲದೇ ಸಾಲ ಮಂಜೂರು ಮಾಡುವುದಿಲ್ಲ ಎಂದರೆ ಸಾಕ್ಷಿ ಜಾಮೀನುದಾರರನ್ನು ಪಡೆದುಕೊಂಡು ಸಾಲ ಮಂಜೂರು ಮಾಡುತ್ತೇವೆ ಎಂದು ಹೇಳುತ್ತಾರೆ. ಜಾಮೀನುದಾರರಿಂದ ನಾವು ಭದ್ರತೆಯನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಆರೋಪಿ ಮತ್ತು ಜಾಮೀನುದಾರರಿಂದ ಭದ್ರತೆಗಾಗಿ ವೇತನ ಪ್ರಮಾಣಪತ್ರ ಪಡೆದುಕೊಂಡಿದ್ದೇವೆ. ಈ ಕೇಸಿನಲ್ಲಿ ಭದ್ರತೆಗಾಗಿ ತೆಗೆದುಕೊಂಡಂತಹ ವೇತನ ಪ್ರಮಾಣಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿ. ವೇತನ ಪ್ರಮಾಣಪತ್ರ ಸಾಮಾನ್ಯವಾಗಿ ಸರಕಾರಿ ನೌಕರರಿಗೆ ಇರುತ್ತದೆ ಎಂದರೆ ಸರಿ. ಜಾಮೀನುದಾರರಾಗಲೀ, ಆರೋಪಿಯಾಗಲೀ ಸರಕಾರಿ ನೌಕರರು ಅಲ್ಲ ಎಂದರೆ ಸರಿ. ಸಾಲದ ಅರ್ಜಿ ಸಲ್ಲಿಸಿದಾಗ ನಾವು ನಮ್ಮ ಕಮೀಟಿಯ ಮುಂದೆ ಮಂಜೂರಾತಿಗಾಗಿ ಇಡುತ್ತೇವೆ ಎಂದರೆ ಸರಿ. ಸಾಲವನ್ನು ಮಂಜೂರು ಮಾಡಬೇಕೋ, ಬೇಡವೋ ಎಂದು ಸಭೆಯಲ್ಲಿ ತೀರ್ಮಾನವಾಗುತ್ತದೆ ಎಂದರೆ ಸರಿ. ಸದರಿ ಸಭೆಯಲ್ಲಿ ಆದಂತಹ ಠರಾವನ್ನು ನ್ಯಾಯಾಲಯದ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಠರಾವನ್ನು ಹಾಜರುಪಡಿಸಿದ್ದು ಅದಕ್ಕೆ ಸಂಬಂಧಪಟ್ಟಂತೆ ಸಭೆಯ ನಡುವಳಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಪ್ರಕರಣವನ್ನು ನಡೆಸಲು ನನಗೆ ನಮ್ಮ ಸೊಸೈಟಿಯವರು ಅಧಿಕಾರವನ್ನು ನೀಡಿಲ್ಲ ಅನ್ನುವುದು ಸರಿಯಲ್ಲ,

ಸಾಕ್ಷಿ ಮುಂದುವರಿದು ನಿ.ಪಿ.6 ನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಅದರೊಂದಿಗೆ ಸಭೆಯಲ್ಲಿ ಆದಂತಹ ಠರಾವನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

ಸಾಮಾನ್ಯವಾಗಿ ವ್ಯಾಪಾರ ಸಾಲ ಮಂಜೂರು ಮಾಡುವಾಗ ಸದರಿ ವ್ಯಾಪಾರಕ್ಕೆ ಸಂಬಂಧಪಟ್ಟಂತಹ ದಾಖಲಾತಿಗಳನ್ನು ಮತ್ತು ಪರವಾನಿಗೆಯನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಆರೋಪಿಗೆ ಸಾಲವನ್ನು ಮಂಜೂರು ಮಾಡುವಾಗ ಅವರಿಂದ ವ್ಯಾಪಾರಕ್ಕೆ ಸಂಬಂಧಪಟ್ಟ ಪಡೆದಂತಹ ದಾಖಲಾತಿಗಳನ್ನು ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿ. ಆರೋಪಿಗೆ ಸಾಲ ಬಾಕಿ ಇದೆ ತುಂಬಿ ಎಂದು ನೋಟಿಸ್‌ನ್ನು ಕೊಟ್ಟಿದ್ದೇವೆ. ಸದರಿ ನೋಟಿಸ್‌ನ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿ. ಭದ್ರತೆಗಾಗಿ ಪಡೆದುಕೊಂಡಂತಹ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಕೇಸನ್ನು ದಾಖಲುಪಡಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಸಾಲದ ಹಣ ಬಾಕಿ ಇಲ್ಲ ಅನ್ನುವುದು ಸರಿಯಲ್ಲ. ಆರೋಪಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಆರೋಪಿ ಶಿಕ್ಷಕಿ ಎಂದು ಕೆಲಸ ಮಾಡುತ್ತಿದ್ದಾಳೆ ಎಂದು ನಮಗೆ ಗೊತ್ತಿತ್ತು ಎಂದರೆ ಸರಿ. ನಿ.ಪಿ.1 ರಲ್ಲಿರುವ ಹಸ್ತಾಕ್ಷರ ಆರೋಪಿಯದು ಅಲ್ಲ ಎಂದರೆ ಸರಿಯಲ್ಲ. ನಿ.ಪಿ.1 ರಲ್ಲಿರುವ ಸಹಿ ಆರೋಪಿಯದು ಅಲ್ಲ ಎಂದರೆ ಸರಿಯಲ್ಲ. ಚೆಕ್ ಅಮಾನ್ಯಗೊಂಡ ನಂತರ ಆರೋಪಿಗೆ ನೋಟಿಸ್ ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ಚೆಕ್ ಕೊಟ್ಟಿದ್ದಾರೆ ಎಂದು ಹೇಳಿದ ದಿನಾಂಕದಂದು ಆರೋಪಿತಳು ಯಾವುದೇ ಹಣವನ್ನು ಮರುಪಾವತಿಸಲು ಬಾಕಿ ಇರಲಿಲ್ಲ ಅನ್ನುವುದು ಸರಿಯಲ್ಲ. ನಿ.ಪಿ.12 ನ್ನು ನೋಡಲಾಗಿ ನಿ.ಪಿ.1ರ ದಿನಾಂಕದವರೆಗಿನ ಸ್ಟೇಟ್‌ಮೆಂಟ್‌ನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಿನಾಂಕ 04-11-2022 ರಿಂದ 31-05-2024 ರ ವರೆಗಿನ ಸ್ಟೇಟಮೆಂಟ್ ಮಾತ್ರ ಹಾಜರುಪಡಿಸಿ ಸತ್ಯ ಸಂಗತಿಗಳನ್ನು ಮರೆಮಾಚಿದ್ದೇವೆ ಅನ್ನುವುದು ಸರಿಯಲ್ಲ. ದಿನಾಂಕ 27-06-2024 ರಂದು ರೂ. 1,12,000-00 ಬಾಕಿ ಇತ್ತು ಎಂದು ತೋರಿಸುವ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಅನ್ನುವುದು ಸರಿಯಲ್ಲ. ಆರೋಪಿತಳು ಯಾವುದೇ ಚೆಕ್ಕನ್ನು ನೀಡಿಲ್ಲ, ಆದ್ದರಿಂದ ಹಣವನ್ನು ಕೊಡಲು ಬಾಧ್ಯಸ್ಥಳಲ್ಲ ಅನ್ನುವುದು ಸರಿಯಲ್ಲ. ಆರೋಪಿ ಯಾವುದೇ ಅಪರಾಧ

ಮಾಡಿಲ್ಲ ಅನ್ನುವುದು ಸರಿಯಲ್ಲ. ಆರೋಪಿತಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಕೇಸನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ